ಮೇಲೆತ್ತಿದ್ದ ತನ್ನ ಕಾಲನ್ನು ಪುನಃ ಕೆಳಗೆ ವೈಪರಿನ ಮೇಲಿಟ್ಟಿತು. ನನಗೆ ಆಶ್ಚರ್ಯವಾಯಿತು. ಅದಕ್ಕೂ ಟ್ರಾಫಿಕ್ ಸಿಗ್ನಲುಗಳು ಗೊತ್ತಿವೆಯೇ?!

ಚಿಕ್ಕಂದಿನಲ್ಲಿ ಬೂರುಗದ ಮರದಿಂದ ಬಂದ ಹಕ್ಕಿಗಳೇ ಬೆಳಗ್ಗೆ ಚಿವ್ ಚಿವ್ ಎಂದು ಕಿರುಚಿ ನಮ್ಮನ್ನು ನಿದ್ದೆಯಿಂದೆಬ್ಬಿಸುತ್ತಿದ್ದವು. ಮನೆ ಚಾವಡಿಗೆ ಬಂದು ಕೂರುವ ಹಕ್ಕಿಗಳನ್ನು ಓಡಿಸುವುದೇ ನಮ್ಮದೊಂದು ಆಟ. ಹಾಗೆ ನಾವು ಓಡಿಸುತ್ತಿದ್ದುದು ಅಮ್ಮನಿಗೆ ಇಷ್ಟವಿರಲಿಲ್ಲ. ''ಇರ್ಲಿ ಬಿಡ್ರೋ ನಿಮಗೇನು ತೊಂದರೆ?'' ಅನ್ನುತ್ತಿದ್ದಳು. ರಾತ್ರಿ ಉಳಿದ ಅನ್ನದ ಅಗುಳುಗಳನ್ನು ಚಾವಡಿಯ ಕೆಳಗೆ ಅಂಗಳದ ಮೂಲೆಯಲ್ಲಿದ್ದ ತಟ್ಟೆಗೆ ಸುರಿದು ಹೋಗುತ್ತಿದ್ದಳು. ಸ್ವಲ್ಪ ಹೊತ್ತು ಹಕ್ಕಿಗಳು, ಮತ್ತೆ ನಮ್ಮ ಬೆಕ್ಕು, ಆಮೇಲೆ ಪಕ್ಕದ ಮನೆಯವರ ಕೋಳಿ ಮತ್ತು ಬೀದಿ ನಾಯಿ ಹೀಗೆ ಅದೃಷ್ಟ ಇದ್ದವಕ್ಕೆಲ್ಲ ಅಲ್ಪ ಸ್ವಲ್ಪ ಆಹಾರ ಸಿಗುತ್ತಿತ್ತು. ಅಮ್ಮ ಹಕ್ಕಿಗಳನ್ನು ಗದರಿಸುತ್ತಿದ್ದದ್ದು ಅವುಗಳ ಪಿಚಿಕೆ ಚಾವಡಿಯಲ್ಲಿ ಕಂಡಾಗ ಮಾತ್ರ. ನೋಡಿದ ತಕ್ಷಣ ಅಮ್ಮ ಅದನ್ನು ಕ್ಲೀನ್ ಮಾಡುತ್ತಿದ್ದಳು. ಅದರೊಂದಿಗೆ ಹಕ್ಕಿಗಳಿಗೆ ನಾಲ್ಕು ಬೈಗಳು. ಮರುಕ್ಷಣದಿಂದ ಹಕ್ಕಿಗಳ ಮೇಲಿನ ಕೋಪ ಮಾಯ. ಮನೆಯಲ್ಲೇ ಇದ್ದು ಕಾಲೇಜು ಕಲಿಯುತ್ತಿದ್ದ ತಮ್ಮ ಉನ್ನತ ವ್ಯಾಸಂಗಕ್ಕೆ ಹೋದಮೇಲೆ ಒಮ್ಮೆ ಫೋನ್ ಮಾಡಿದಾಗ ಅಮ್ಮ, ''ಮನೆಯ ಬೆಕ್ಕು ಮತ್ತು ಬೂರುಗದ ಹಕ್ಕಿ ಇವೇ ಈಗ ನಮ್ಮ ಸಂಗಾತಿಗಳು'' ಅಂದಿದ್ದಳು. ಅಮ್ಮನಿಗೆ ಫೋನ್ ಮಾಡಿ ಇದೀಗ ಬೆಳಗಿನ ಟ್ರಾಫಿಕ್‌ನಲ್ಲಿ ನನಗೂ ಬೂರುಗದ ಹಕ್ಕಿ ಸಂಗಾತಿಯಾಗಿದೆ ಎನ್ನಬೇಕು ಎಂದುಕೊಂಡೆ.



ನಾನು ಆಫೀಸು ಸಮೀಪಿಸುತ್ತಿದ್ದೆ. ಅಶೋಕ ಹೋಟೆಲಿನ ಬಳಿ ತಲುಪಿದಾಗ ಇದ್ದಕ್ಕಿದ್ದಂತೆ ಹಕ್ಕಿ ಪಟಪಟನೆ ಹಾರಿ ಅಶೋಕ ಹೋಟೆಲಿನ ಹಿಂಭಾಗದಲ್ಲಿ ಮಾಯವಾಯಿತು. ಅರೆ! ನನ್ನ ಕಣ್ಣಿಗಂತೂ ಯಾವ ಬೆದರಿಕೆಯೂ ಕಂಡಿರಲಿಲ್ಲ. ಹಕ್ಕಿ ಈ ರೀತಿ ಹಾರಿಹೋದದ್ದು ಹಲವಾರು ಹೊಸ ಪ್ರಶ್ನೆಗಳನ್ನು ಸೃಷ್ಟಿಸಿತ್ತು. ಆ ಹಕ್ಕಿಗೆ ಇಲ್ಲಿಗೆ ಬರಬೇಕಿತ್ತೆ? ಅದಕ್ಕಾಗಿ ನನ್ನ ಕಾರನ್ನು ಆಶ್ರಯಿಸಿತೆ? ಅಥವಾ ಬಾನೆಟ್ ಬಿಸಿಯಾಗಿ ಅಲ್ಲಿ ಕುಳ್ಳಿರಲು ಸಾಧ್ಯವಾಗದೆ ಹಾರಿ ಹೋಯಿತೇ? ಅದರ ಸಂಸಾರ ನಮ್ಮ ಮನೆಯ ಹತ್ತಿರ ಇದೆಯೇ? ಅಥವಾ ಅಶೋಕ ಹೋಟೆಲಿನ ಹಿಂಭಾಗದಲ್ಲಿದೆಯೇ? ಕಾರಣಾಂತರಗಳಿಂದ ನಮ್ಮ ಮನೆಯ ಬಳಿ ಬಂದಿತ್ತೇ? ಇನ್ನು ಅದು ಹೇಗೆ ಹಿಂದೆ ಹೋಗುತ್ತೆ? ಈ ಹಕ್ಕಿ ಗಂಡೋ ಹೆಣ್ಣೋ? ನಾನು ಆಫೀಸು ತಲುಪುವಷ್ಟರಲ್ಲಿ ಹಕ್ಕಿ ಮನಸ್ಸನ್ನು ಕದಡಿ ಹಾಕಿತ್ತು. ಆಫೀಸಿನ ನಿತ್ಯಗೊಂದಲಗಳು ಆರಂಭವಾದಂತೆ ಮರೆತು ಹೋದ ಹಕ್ಕಿ ಸಂಜೆ ಆಫೀಸಿನಿಂದ ಹಿಂದಿರುವಾಗ ಅಶೋಕ ಹೋಟೆಲಿನ ಬಳಿ ಪುನಃ ನೆನಪಾಗಿ 'ದೇವರೇ ಅದಕ್ಕೊಂದು ಕುಟುಂಬ ಅಂತ ಇದ್ದರೆ ಅದನ್ನು ಕುಟುಂಬದೊಂದಿಗೆ ಸೇರಿಸಿಬಿಡಪ್ಪ. ನನ್ನಿಂದಾಗಿ ಅದರ ಬಾಳು ಹಾಳಾಗಬಾರದು' ಎಂದು ಪ್ರಾರ್ಥಿಸಿದ್ದೆ.

ನಮ್ಮ ದಿನಚರಿ ವಾರದುದ್ದಕ್ಕೂ ಒಂದೇ ಥರ. ಮರುದಿನವೂ ಒಂಬತ್ತೂ ಹತ್ತಕ್ಕೆ ಮನೆಯಿಂದ ಹೊರಡುವಾಗ ಹಕ್ಕಿ ನೆನಪಾಯಿತು. ಕಾರು ಹತ್ತುತ್ತಿದ್ದಂತೆ ಬಾನೆಟ್ ಮೇಲೆ ಹಕ್ಕಿ ಹಾಜರ್! ನನಗೆ ವಿಸ್ಮಯ. ಇವತ್ತು ಪುನಃ ಕಾರಿನ ಮೇಲೆ ಕುಳಿತಿದೆ ಅಂದರೆ? ಅಂದರೆ... ಹಕ್ಕಿ ನಿನ್ನೆ ತನ್ನ ಗೂಡಿಗೆ ಮರಳಿ ಬಂದಿದೆ! ಹೆಚ್ಚು ಯೋಚಿಸುವುದಕ್ಕೆ ಸಮಯವಿರಲಿಲ್ಲ. ಅದಕ್ಕೊಂದೆರಡು ಬಾರಿ, ''ಶೂ ಶೂ'' ಹೇಳಿ ಕಾರಲ್ಲಿ ಕುಳಿತು ಸ್ಟಾರ್ಟ್ ಮಾಡಿ ರಸ್ತೆಗಿಳಿಸಿದ್ದೆ. ನನ್ನ ಗದ್ದಲಕ್ಕೆ ಒಮ್ಮೆ ಮೇಲೆ ಹಾರಿ ಮರದ ರೆಂಬೆಯಲ್ಲಿ ಕುಳಿತ ಹಕ್ಕಿ ಕಾರು ಹೊರಟಾಗ ವೈಪರಿನ ಮೇಲೆ ಬಂದು ಕೂತಿತು! ಇದೇನು ವಿಚಿತ್ರ... ಇವತ್ತೂ ನನ್ನೊಂದಿಗೆ ಇದರ ಪಯಣವಾ? ನನ್ನ ಯೋಚನಾ ಲಹರಿಯ ಬಗ್ಗೆ ನನಗೇ